ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) ಇವರ ವಿರುದ್ಧ ವಿಧಾನಸೌಧದ ಮುಂದೆ ಧರಣಿ ಮಾಡುತ್ತೇವೆಂದು ಪತ್ರ ಬಂದಿರುವುದು

ಶ್ರೀ ಪಿ.ಜಿ.ಆರ್. ಸಿಂಧ್ಯ:-- ನನಗೆ ಈ ವಿಚಾರ ಪ್ರಸ್ತಾಪಿಸುವುದಕ್ಕೆ ಮುಜುಗರ ಇದೆ, ನೋವು ಇದೆ. ನನಗೆ 6–7 ತಿಂಗಳ ಹಿಂದೆ, ಸದನದ ಅವತ್ತಿನ ಮಾನ್ಯ ಸದಸ್ಯರು ಮತ್ತು ಇವತ್ತಿನ ಮಾನ್ಯ ಮಂತ್ರಿಗಳು ಆಗಿರತಕ್ಕ ಶ್ರೀ ಗೋಪಿನಾಥ ಸಾಂಡ್ರ ಅವರ ಬಗ್ಗೆ ಒಂದು ಪತ್ರ ಬಂದಿದೆ. ಆ ಪತ್ರದಲ್ಲಿ ನನಗೆ ನೀವು ನ್ಯಾಯ ಒದಗಿಸಿಕೊಡಬೇಕು ಮತ್ತು ನೀವು ನ್ಯಾಯ ಒದಗಿಸಿಕೊಡದಿದ್ದರೆ ನಾನು ವಿಧಾನಸೌಧದ ಮುಂದೆ ಧರಣಿ ಮಾಡುತ್ತೇನೆಂದು ಒಂದು ಪತ್ರ ಬರೆದಿದ್ದರು. ಆ ಪತ್ರದ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ. ಏಕೆಂದರೆ ಶಾಸಕರ ವೈಯಕ್ತಿಕ ವಿಚಾರದ ಬಗ್ಗೆ ಚರ್ಚೆ ಮಾಡತಕ್ಕದ್ದು, ಈ ಸದನದ ವೇಳೆಯನ್ನು ವ್ಯಯ ಮಾಡತಕ್ಕದ್ದು ಸರಿಯಲ್ಲವೆಂದು ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗಿರಲಿಲ್ಲ. ನನಗೆ ಗೊತ್ತಿರುವ ಹಾಗೆ, ಈ ಸದನದ ಅನೇಕ ಸದಸ್ಯರಿಗೂ ಅವರು ಪತ್ರ ಬರೆದಿದ್ದಾರೆ. ಅದಾದನಂತರ ಶುಕ್ರವಾರ, ಈ ನಾಡು, ಎಂಬ ತೆಲುಗು ಪತ್ರಿಕೆಯಲ್ಲಿ ಈ ವಿಷಯ ಪ್ರಕಟವಾಗಿದೆ. ಅದರ ಕಡೆಯೂ ನಾನು ಗಮನ ಕೊಟ್ಟಿರಲಿಲ್ಲ. ಆದರೆ ಈ ಬಗ್ಗೆ ನೆಲ್ಲೂರಿನ ನ್ಯಾಯಾಲಯದಲ್ಲಿ ಕೇಸು ದಾಖಲಾಗಿದೆ ಎಂದು ತಿಳಿದ ಮೇಲೆ, ದೇಶಪಾಂಡೆಯವರು ಮತ್ತು ನಾನು ಇದರ ಬಗ್ಗೆ ಚರ್ಚೆ ಮಾಡಿ ನಾವು ಜವಾಬ್ದಾರಿ ಸ್ಥಾನದಲ್ಲಿದ್ದೇವೆ. ಒಬ್ಬರ ಬಗ್ಗೆ ವಿಷಯದ ಸತ್ಯಾಸತ್ಯತೆ ಏನು ಎಂದು ತಿಳಿಯದೆ ಪ್ರಸ್ತಾಪ ಮಾಡಿ ಅವರ ಹೆಸರಿಗೆ ಕಳಂಕ ತರಬಾರದೆಂಬ ದೃಷ್ಟಿಯಿಂದ ಪ್ರಸ್ತಾಪ ಮಾಡದೆ ನ್ಯಾಯಾಲಯಕ್ಕೆ ಹೋಗಿರುವ ಕೇಸಿನ ಬಗ್ಗೆ ನಮ್ಮದೇ ಆದ ಮೂಲಗಳಿಂದ ವಿಷಯ ತಿಳಿದುಕೊಂಡು ಖಚಿತವಾದ ಮೇಲೆ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಮ್ಮ ಪರವಾನಗಿಯನ್ನು ಕೋರುತ್ತಿದ್ದೇನೆ. ಈ ವಿಚಾರ ಗೋಪಿನಾಥ ಸಾಂಡ್ರ ಮತ್ತು ಅವರ ಮಗ ಇವರಿಬ್ಬರ ವಿರುದ್ಧ ಇದೆ. ಆಂಧ್ರಪ್ರದೇಶದ ನೆಲ್ಲೂರಿನ ನ್ಯಾಯಾಲಯದಲ್ಲಿ ಕೇಂದ್ರ ಸರ್ಕಾರದ ವರದಕ್ಷಿಣೆ ಮತ್ತು ವಧು ನಿಷೇಧದ ಅಧಿನಿಯಮದ ಕಲಂ 6–7 ರ ಅಡಿಯಲ್ಲಿ ಅವರು ಖಾಸಗಿ ಮೊಕದ್ದಮೆ ಹಾಕಿರುವುದಾಗಿ ಇವತ್ತಿನ ಪತ್ರಿಕೆಗಳಲ್ಲಿ ಬಂದಿದೆ. 'ಈ ನಾಡು' ಪತ್ರಿಕೆಯಲ್ಲಿ ಬಂದಿರುವ ಹಾಗೆ ಈ ಮೊಕದ್ದಮೆಗಳನ್ನು ಈಗಾಗಲೇ ದಾಖಲು ಮಾಡಿದ್ದಾರೆ. ಶ್ರೀಮತಿ ಶಿರಿಷಾ ಅವರು ಸಾಂಡ್ರ ಅವರ ಪುತ್ರ ಉದಯ ಸಾಂಡ್ರಾ.

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ಈ ಪ್ರಶ್ನೆಯನ್ನು ಎತ್ತಿದ ಕೂಡಲೇ ಮಧ್ಯೆ ಪ್ರವೇಶ ಮಾಡಬಾರದೆಂದೂ ಮತ್ತು ಯಾವ ದಿಕ್ಕಿನಲ್ಲಿ ಹೋಗುತ್ತದೆಂದು ನೋಡಿದ ಮೇಲೆ ಹೇಳೋಣವೆಂದು ಸುಮ್ಮನಿದ್ದೆ. ಇವತ್ತು ಪತ್ರಿಕೆಯಲ್ಲಿ ಬಂದಿದೆ, ನಾನೂ ಕೂಡ ಓದಿದ್ದೇನೆ. ಇದು ನಮ್ಮ ಸರ್ಕಾರದ ಯಾವುದೇ ಒಂದು ಕರ್ತವ್ಯಕ್ಕೆ ಸಂಬಂಧಪಟ್ಟ ವಿಚಾರ ಅಲ್ಲ. ವೈಯಕ್ತಿಕ ಪ್ರಶ್ನೆ. ಏಕೆಂದರೆ, ಸರ್ಕಾರ ಇದಕ್ಕೆ ಉತ್ತರಿಸುವುದಕ್ಕೆ ಆಗುವುದಿಲ್ಲ. ವಿವರಗಳನ್ನು ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ. ತಾವು ಎತ್ತಿದ ವಿಚಾರ ಕೂಡ ಅದಕ್ಕೆ ಅನ್ವಯವಾಗುತ್ತದೆ. ನಮ್ಮ ನಿಯಮದ ಪ್ರಕಾರ ವೈಯಕ್ತಿಕ ವಿಚಾರವಾದುದರಿಂದ ತಮಗೆ ನೋಟೀಸ್ ಕೊಡಬೇಕಾಗುತ್ತದೆ. ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಸಂಬಂಧಪಟ್ಟ ಸಚಿವರಿಗೆ ಹಕ್ಕು ಇದೆ; ಅವಕಾಶ ಇದೆ. ಆದುದರಿಂದ ಇದರ ಬಗ್ಗೆ ಅವರು ತಮಗೆ ನೋಟೀಸ್ ಕೊಡಲಿ you can kindly supply the same to the Hon'ble Minister. It can be raised and he can reply. ಇದಕ್ಕೆ ಸರ್ಕಾರ ಉತ್ತರ ಕೊಡುವುದಕ್ಕಾಗುವುದಿಲ್ಲ. ವೈಯಕ್ತಿಕ ವಿಷಯವಾದುದರಿಂದ ಸರ್ಕಾರ ಪ್ರವೇಶ ಮಾಡುವುದಕ್ಕೆ ಬರುವುದಿಲ್ಲ. Of course, it will come with the periphery or propriety. Ultimately it comes to that. ಅದು ಬಂದಾಗ ಆ ಪ್ರಶ್ನೆ ಪ್ರತ್ಯೇಕ. I am just telling that, it is more

appropriate that these personal questions are raised in conformity with the rules of this House.

SRI C. BYRE GOWDA:– Moreover, it is a family problem.

ಅದನ್ನೆಲ್ಲಾ ಇಲ್ಲಿ ಚರ್ಚೆ ಮಾಡುವುದು ನನಗೆ ಅಷ್ಟು ಸೂಕ್ತವೆಂದು ಅನ್ನಿಸುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:– ಬೈರೇಗೌಡರು ಹೇಳಿದ್ದುದು ಸರಿ. ಇಲ್ಲಿ ಏನಾಗಿದೆ ಎಂದರೆ, ಮೊನ್ನೆ ಬಿ–ರಿಪೋರ್ಟ್ ಕೊಡುವ ವಿಚಾರ ಬಂತು. ಆಗ ನಾನು ಹೇಳಿದೆ, ಇಂಥ ಪ್ರಶ್ನೆಗಳನ್ನು ಎತ್ತಿದರೆ ಎಲ್ಲಿ ಪ್ರಾರಂಭವಾಗುತ್ತದೆ, ಎಲ್ಲಿ ಕೊನೆಯಾಗುತ್ತದೆಂದು ಗೊತ್ತಾಗುವುದಿಲ್ಲ. It will reflect the whole House. ಸದನದ ಎಲ್ಲಾ ಸದಸ್ಯರಿಗೂ ಬರುತ್ತದೆ. ಫ್ಯಾಮಿಲಿ ಪ್ರಾಬ್ಲಂ ಎಲ್ಲರಿಗೂ ಇರುತ್ತದೆ, ಪ್ರತಿಯೊಬ್ಬರಿಗೂ ಇದೆ. So far it does not touches the Government.

ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. It may wrongly reflect. It think such family problems are not raised. 1988ರಲ್ಲಿ ನಡೆದದ್ದು ಎಂದು ಹೇಳಿದ್ದರು, ಅದರ ಪರಿಸ್ಥಿತಿ ಏನಾಗಿದೆ ಎಂಬುದರ ಬಗ್ಗೆ ಉತ್ತರ ಕೊಡುತ್ತಾರೆ. Anyway having raised it, he is bound to give reply to it.

ಶ್ರೀ ಎಸ್. ರಮೇಶ್:– ರೇವಣ್ಣನವರ ರಾಜೀನಾಮೆ ತೆಗೆದುಕೊಂಡರಲ್ಲ ಅದು ಪಾರ್ಟಿ ಪ್ರಾಬ್ಲಮ್ ಅಲ್ಲವೇ ? ಅದು 1984ರಲ್ಲಿ ಆಗಿದ್ದು. ಅದಕ್ಕೆ ರಾಜೀನಾಮೆ ತೆಗೆದುಕೊಂಡಿರಿ.

SRI VEERAPPA MOILY:– That was when he was not a Minister. After he has become the Minister, if he has involved in an offence... ಆಫೆನ್ಸ್ ಏನಿದೆಯೋ ನಮಗೆ ಗೊತ್ತಿಲ್ಲ. It is now raked up after 1984.

ಆದುದರಿಂದ ಇಪತ್ತು ಹುಟ್ಟಿದಂದಿನಿಂದ ಎಲ್ಲರ ಪುರಾಣ ಇಲ್ಲಿ ಬಿಚ್ಚಲಿಕ್ಕೆ ಹೋದರೆ ಅದು ಅಂತ್ಯವಾಗುತ್ತದೆಂದಾಗುವುದಿಲ್ಲ. It will be, ನಮ್ಮ ಶಾಸಕರ ಮೇಲೆ, ಶಾಸಕರ ವೈಯುಕ್ತಿಕ ಜೀವನದ ಮೇಲೆ ನಾವೇ ಬರೆ ಎಳೆಯತಕ್ಕ ಮತ್ತು ಕಳಂಕ ಹಚ್ಚತಕ್ಕ ಪ್ರವೃತ್ತಿ ಸರಿಯಲ್ಲ. Yes. Dowry offence ಮಾಡಿದರೆ if the case is filed in the Court, it is for the Court to adjudicate. ತಾವು ಹೇಳಿದ ಪ್ರಕಾರ it is before the Court. When it is before the Court, it is subjudice. ಆ ಪಾಯಿಂಟ್ ಕೂಡ ಬರುತ್ತದೆ. ಆದ್ದರಿಂದ ದಯಮಾಡಿ ಇದನ್ನು ಬಹಳ ಹೆಚ್ಚು ಬೆಳೆಸದೇ ತಾವು ತಮ್ಮ ಛೇಂಬರ್ಸ್‌ನಲ್ಲಿ ಕರೆಯಿರಿ ಅಥವಾ ಅವರ ಎಕ್ಸ್‌ಪ್ಲನೇಷನ್ ಕೇಳಿ ಅಥವಾ ಇಲ್ಲಿ ಎತ್ತುವುದಿದ್ದರೆ he has to give it in writing and he will have an opportunity to reply.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದುದು ಸಾಧುವೆನಿಸುತ್ತದೆ. ವೈಯುಕ್ತಿಕವಾಗಿ ಪಾಪ, ಸಾಂಸಾರಿಕ ವಿಷಯವನ್ನು ಎಳೆದು ಮತ್ತು ನ್ಯಾಯಾಲಯದಲ್ಲಿ ಯಾರು ಯಾರ ಮೇಲೆ ಬೇಕಾದರೂ ಮೊಕದ್ದಮೆ ಹಾಕಬಹುದು, ಹಾಕಬಾರದೆಂದಲ್ಲ. ಆದರೆ ಇಂಥ ಒಂದು ಪ್ರಶ್ನೆ ಬಂದಾಗ ನಾವು ಇನ್ನೂ ಆಳವಾಗಿ ಅಭ್ಯಾಸ ಮಾಡಿ ಇಲ್ಲಿ ಚರ್ಚೆ ನಡೆಸಿದರೆ ಒಳ್ಳೆಯದೆನಿಸುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಇದನ್ನು ಕೇವಲ ವೈಯುಕ್ತಿಕ ವಿಚಾರ ಎಂದು ತಳ್ಳಿ ಹಾಕುವ ಪ್ರಶ್ನೆ ಅಲ್ಲ. ಕಾರಣ ಇಷ್ಟೇ. ಇಂತಹ ಅಪರಾಧಿಗಳಿಗೆ ಸಂಬಂಧಪಟ್ಟ ಹಾಗೆ ಮೊಕದ್ದಮೆ ದಾಖಲು ಆದಮೇಲೆ ಆರೋಪಿಗಳು ಪ್ರಭಾವ ಬೀರುವಂತಹ ಸ್ಥಾನದಲ್ಲಿ ಇರಬಾರದು ಎಂದು ನಾವು

ರೂಢಿಸಿಕೊಂಡು ಬಂದಿರತಕ್ಕ ಒಂದು ಸಂಪ್ರದಾಯ. ಸರ್ಕಾರಿ ನೌಕರರಿಗೂ ನಾವು ಅಂತಹದ್ದೇ ನಿಯಮ ಮಾಡಿದ್ದೇವೆ. ವಿಚಾರಣೆ ನಡೆಯುವ ಕಾಲದಲ್ಲಿ ಅವರನ್ನು ಸಸ್ಪೆಂಡ್ ಮಾಡುತ್ತೇವೆ. ಆ ಕಾನೂನು ನಾವೇ ಮಾಡಿರುವವರು. ಇಂತಹ ಕಾನೂನು ಮಾಡಿರುವವರು How can we continue in office when an enquiry is going on? That too... ವರದಕ್ಷಿಣೆಗೆ ಸಂಬಂಧಪಟ್ಟಿದ್ದುದು. ಅದು ಆಯಿತು. ಮತ್ತೊಂದು ಸರ್ಕಾರಕ್ಕೆ ನೇರವಾಗಿ ಸಂಬಂಧಪಟ್ಟಿದ್ದುದು.

ಅಧ್ಯಕ್ಷರು:– ಪ್ರೊಫೆಸರ್ ಅವರೇ ತಾವು ಬೇರೆ ವಿಷಯ ಪ್ರಸ್ತಾಪ ಮಾಡುತ್ತೀರಿ ಎಂದು ತಿಳಿದಿದ್ದೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಸಿಂಧ್ಯಾ ಅವರು ನಿಂತಿದ್ದಾರೆ. ಅವರು ಮಾತನಾಡಲಿ.

(ಗೊಂದಲ)

ಪ್ರೊ ಎಂ.ಡಿ. ನಂಜುಂಡಸ್ವಾಮಿ:– ವೈಯುಕ್ತಿಕ ಅಲ್ಲ. ನೇರವಾಗಿ ಸರ್ಕಾರಕ್ಕೆ ಸಂಬಂಧಪಟ್ಟಿದ್ದುದನ್ನು ನಾನು ಮಾತನಾಡುತ್ತೇನೆ.

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್:– ಮಾನ್ಯ ಅಧ್ಯಕ್ಷರೇ, ಈ ವಿಚಾರವಾಗಿ ಸಿಂಧ್ಯಾ ಅವರು ಪ್ರಸ್ತಾಪ ಮಾಡಿದಾಗ ಮುಖ್ಯಮಂತ್ರಿಯವರೇ ವಿನಂತಿ ಮಾಡಿಕೊಂಡಿದ್ದಾರೆ. ಅವರು ಅಧ್ಯಕ್ಷರಿಗೆ ನೋಟೀಸ್ ಕೊಡಲಿ. ಅವರು ಎಕ್ಸ್‌ಪ್ಲನೇಷನ್ ಕೊಟ್ಟರೆ ತಾವು ಪ್ರಸ್ತಾಪ ಮಾಡುವುದು, ತದನಂತರ ಉದ್ಭವವಾಗುತ್ತದೆ. It is too premature also.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನಾವು ಇಲ್ಲಿ ಪ್ರತಿನಿಧಿಗಳಾಗಿ ಬಂದು ಯಾವ ಮಟ್ಟದ ವಿಶ್ವಾಸ ಗಳಿಸಿಕೊಳ್ಳಬೇಕೆನ್ನುವುದು ಪ್ರಶ್ನೆ. ಸರ್ಕಾರಕ್ಕೆ ನೇರವಾಗಿ ಸಂಬಂಧಪಟ್ಟ ವಿಚಾರ ಬೇರೆ ಹೇಳುತ್ತೇನೆ. ಮಾಜಿ ಸಚಿವರ ಬಗ್ಗೆ ನಾನು ಸುಮಾರು 300 ಪುಟಗಳ ದಾಖಲೆ ಮಾನ್ಯ ಮುಖ್ಯಮಂತ್ರಿಗಳ ಕೈಗೆ ಕೊಟ್ಟೆ. ಆ ದಾಖಲೆಗಳ ಆಧಾರದ ಮೇಲೆ ಈ ಸದನದ ಅಂದಾಜು ಸಮಿತಿ ಕೂಡಾ 2 ವರದಿ ಕೊಟ್ಟಿದೆ, using one's office, tampering revenue document, filing false affidavit...

ಅಧ್ಯಕ್ಷರು:– ಪ್ರೊಫೆಸರ್, ತಾವು ಏನು ಕೊಟ್ಟಿದ್ದೀರಿ, ನನ್ನ ಜೊತೆ ಮಾತನಾಡಿ. ಆಮೇಲೆ ನಾನು ಪ್ರಸ್ತಾಪ ಮಾಡುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ವೈಯಕ್ತಿಕವಾಗಿ ಅವರಿಗೆ ಕೊಟ್ಟಿದ್ದೇನೆ. ಮಾಜಿ ಮಂತ್ರಿ ಪುಟಸ್ವಾಮಿಗೌಡರ ಬಗ್ಗೆ ನನಗೆ ವೈಯುಕ್ತಿಕವಾಗಿ ಏನೂ ಇಲ್ಲ. But the point is, ನಾವು ಎಷ್ಟು ವಿಶ್ವಾಸ ಉಳಿಸಿಕೊಳ್ಳಬೇಕೆಂದು ದಯವಿಟ್ಟು ಹೇಳಬೇಕು.

ಅಧ್ಯಕ್ಷರು:– ತಾವು ದಯವಿಟ್ಟು ಕುಳಿತುಕೊಳ್ಳಿ. ಸಿಂಧ್ಯ ಅವರು ಮಾತನಾಡಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಏನು ಹೇಳಿದ್ದಾರೆ, I am making it very clear. ಈ ಸದನದಲ್ಲಿ ಬೇಕಾದಷ್ಟು ಮಹತ್ವವಾದ ವಿಚಾರಗಳ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಮಾನ್ಯ ಜಾಲಪ್ಪನವರು ಈ ಸದನದ ಗೌರವಾನ್ವಿತ ಸದಸ್ಯರು ಅವರ ಬಗ್ಗೆ ಒಂದು ಆಪಾದನೆ ಬಂತು. ರಷೀದ್ ಎನ್ನತಕ್ಕ ಒಬ್ಬ ವಕೀಲರ ಮರ್ಡರ್ ಕೇಸಿನಲ್ಲಿ ಇವರು ಇನ್‌ವಾಲ್ವ್ ಆಗಿದ್ದಾರೆನ್ನುವ ಆಪಾದನೆ ಬಂತು. ಅದು ಅವರ ವೈಯುಕ್ತಿಕ ವಿಚಾರವೆಂದು ಹೇಳಬಹುದು. Please listen to me. ತಾವು ಹೇಳಿದ್ದನ್ನು ನಾನು ಈಲ್ಡ್ ಆಗಿ ಕೇಳಿದ್ದೇನೆ. ನಾನು ಹೇಳುವುದನ್ನು ಮಾನ್ಯ ಮುಖ್ಯಮಂತ್ರಿಗಳು ಕೇಳಬೇಕು. ವೈಯಕ್ತಿಕವಾಗಿ

ಯಾವುದು, ಎಂಎಲ್‌ಎ ಆಗಿ ಯಾವುದು, ಮಂತ್ರಿಯಾಗಿ ಯಾವುದು ಇದು ಡಿಫರೆನ್ಷಿಯೇಟ್ ಮಾಡತಕ್ಕದ್ದು ಬಹಳ ಕಷ್ಟವಾಗುತ್ತದೆ. Offence is an offence. ತಾವು ವಕೀಲರು.

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ಈಲ್ಡ್ ಆಗಬೇಕು. ನಾನು ಈಲ್ಡ್ ಆಗುತ್ತೇನೆ. ಇಲ್ಲಿ ಪ್ರಶ್ನೆ ಏನೆಂದರೆ, If there is any complaint on dowry, filed by the particular person, ಅವರ ಸೊಸೆ ಏನಾದರೂ ನಮ್ಮ ಸರ್ಕಾರಕ್ಕೆ ಫೈಲ್ ಮಾಡಿದ್ದರೆ if the complaint has not been registered or the complaint has not been investigated, it is another matter. You can always put the question. There is no such thing pending before the Police or the Government. ಯಾವ ಕಂಪ್ಲೇಂಟ್ ಕೂಡ ನಮ್ಮ ಪೊಲೀಸರಿಗೆ ಬಂದದ್ದು ಇಲ್ಲ. ಯಾವ ಕೇಸು ಕೂಡ ಇನ್‌ವೆಸ್ಟಿಗೇಷನ್‌ನಲ್ಲಿ ಇಲ್ಲ. If there is a failure on the part of the Government to register or prosecute a particular person. I can understand. ಈ ಪ್ರಶ್ನೆ ಕೇಳಬಹುದು ತಾವು. ಈಗ ಪ್ರಶ್ನೆ ಬಂದದ್ದು ಬೇರೆ. I do not want to go on that. ಈಗ ಆ ಪರಿಯಾಕ್ಕೂ ಈ ಪರಿಯಾಕ್ಕೂ ಸ್ವಲ್ಪ ವ್ಯತ್ಯಾಸವಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ನನಗೆ ಮಾನ್ಯ ಮೊಯಿಲಿಯವರ ಅವರ ಸರ್ಕಾರದ ಬಗ್ಗೆ ಅಥವಾ ಮೊಯಿಲಿಯವರನ್ನು ವೈಯಕ್ತಿಕವಾಗಿ ಪೇಚಿಗೆ ಸಿಕ್ಕಿಸಬೇಕು ಎನ್ನತಕ್ಕ ಆಸೆ ಖಂಡಿತವಾಗಿಯೂ ಇಲ್ಲ. ನಾನು ಈ ಸದನದಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ ಬಹಳ ಜವಾಬ್ದಾರಿಯಿಂದ ಮತ್ತು ಮಹತ್ತರ ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇನೆಯೇ ಹೊರತು, ತಾವು ಅಲ್ಲಿ ಕುಳಿತಿದ್ದೀರಿ, ನಾವು ಇಲ್ಲಿ ವಿರೋಧಪಕ್ಷದಲ್ಲಿ ಕುಳಿತಿದ್ದೇವೆ. ನಮಗೆ ಈ ರಾಜ್ಯದ ಜನ ಕೇಳುತ್ತಾರೆ, ನೀವೇನು ಶಾಮೀಲಾಗಿದ್ದೀರಾ ? ನೀವು ಸರ್ಕಾರ ಮಾಡತಕ್ಕ ತಪ್ಪುಗಳನ್ನು ಎತ್ತಿ ಹಿಡಿಯುತ್ತಿಲ್ಲ ನೀವು ಶಾಮೀಲಾಗಿದ್ದೀರಿ ಎನ್ನತಕ್ಕ ಗೂಬೆ ಕೂರಿಸತಕ್ಕ ಪ್ರಯತ್ನ ಮಾಡುತ್ತಾರೆ. ಸರ್ಕಾರದಲ್ಲಿರತಕ್ಕ ಜನಗಳು ಏನು ಮಾಡುತ್ತಾರೆ ಅದನ್ನು ಎತ್ತಿಹಿಡಿಯುವುದು ನನ್ನ ಕರ್ತವ್ಯ, ಅದನ್ನು ನಾನು ಮಾಡಬೇಕಾಗುತ್ತದೆ. ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ನಾನು ಇಲ್ಲಿ ಕುಳಿತುಕೊಂಡು ತಮ್ಮನ್ನು ಮುಜುಗರಕ್ಕೆ ಸಿಕ್ಕಿಸಬೇಕೆಂದು ಇಲ್ಲ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ನಮಗೆ ಈ ತರಹ ಯಾವುದೇ ಆಸೆಯಿಲ್ಲ. ಸಾಂಡ್ರರವರ ಬಗ್ಗೆ ಏನೊಂದು ಅಪಾದನೆ ಬಂದಿದೆ, ಅದರ ಜೊತೆಗೆ ಎರಡು ಮೂರು ಅಪಾದನೆಗಳ ಬಗ್ಗೆ ಪತ್ರಗಳು ಬಂದಿವೆ. ಈ ಪತ್ರ ಶ್ರೀ ಎನ್ನತಕ್ಕ ಹೆಣ್ಣು ಮಗಳು ಬರೆದಿರತಕ್ಕ ಪತ್ರ. ಏಳು ತಿಂಗಳ ಹಿಂದೆ ನನಗೆ ಬಂದಾಗ ನಾನು ಏಕೆ ಇದನ್ನು ಅಸೆಂಬ್ಲಿಯಲ್ಲಿ ರೈಸ್ ಮಾಡಲಿಲ್ಲ ? ನನಗೆ ಒಬ್ಬನಿಗೆ ಬಂದಿಲ್ಲ. ಈ ಸದನದ ಅನೇಕ ಸದಸ್ಯರಿಗೂ ಈ ಪತ್ರ ಬಂದಿದೆ ಸ್ವಾಮಿ. ನಾನು ಏತಕ್ಕೆ ರೈಸ್ ಮಾಡಲಿಲ್ಲವೆಂದರೆ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಬೇಕೆಂದು ರೈಸ್ ಮಾಡಲಿಲ್ಲ. ಇದೇ ಸದನದಲ್ಲಿ ಚರ್ಚೆ ಆಗತಕ್ಕ ಸಂದರ್ಭದಲ್ಲಿ.

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಇಲ್ಲಿ ಎರಡು ವಿಚಾರಗಳು ಅಡಕವಾಗಿವೆ. ಒಂದು, ಸದನದ ಸದಸ್ಯರಾಗಿ ಅವರಿಗೆ ಇರತಕ್ಕ ಹಕ್ಕು. ಮಾನ್ಯ ಗೋಪಿನಾಥ ಸಾಂಡ್ರರವರು ಈ ಸದನದ ಸದಸ್ಯರು. ಅವರ ಮೇಲೆ ವ್ಯಕ್ತಿಗತವಾದ ಯಾವುದೇ ಆರೋಪಗಳು ಇರಬಹುದು. ಅದನ್ನು ರೈಸ್ ಮಾಡಬೇಕಾದರೆ ಅದಕ್ಕೆ ನಿಯಮಾವಳಿಗಳ ಚೌಕಟ್ಟಿನಲ್ಲಿ ಅವಕಾಶವಿದೆ. ಮಾನ್ಯ ಸಿಂಧ್ಯಾರವರು ಎತ್ತಿರತಕ್ಕ ಪ್ರಸ್ತಾವನೆ ಏನಿದೆ ಈ ಪ್ರಸ್ತಾವನೆಯನ್ನು ತಾವು ತೀವ್ರವಾಗಿ ಆಲೋಚನೆ ಮಾಡುವುದಾದರೆ ಮಾನ್ಯ ಈ ಸದನದ ಒಬ್ಬ ಸದಸ್ಯರ ಆತ್ಮಗೌರವಕ್ಕೆ ಕುಂದು ತರತಕ್ಕ ಮಾತುಗಳು ಬರುವುದಕ್ಕೆ ಅವಕಾಶವಿದೆ. ಆದುದರಿಂದ ಮಾನ್ಯ ಸಭಾಧ್ಯಕ್ಷರಲ್ಲಿ ನಾನು ಪ್ರಾರ್ಥನೆ ಮಾಡತಕ್ಕದ್ದು ಏನೆಂದರೆ, ಇದಕ್ಕೆ ಸಭ್ಯಕ್ಕೆ ವಿರಾಮ ಕೊಟ್ಟು ಮಾನ್ಯ ಸಿಂಧ್ಯಾರವರು ಇದರ ಬಗ್ಗೆ

ಬರವಣಿಗೆಯ ಮೂಲಕ ಸಭಾಧ್ಯಕ್ಷರಿಗೆ ಕೊಟ್ಟಾಗ ಮಾನ್ಯ ಸಭಾಧ್ಯಕ್ಷರು ಅದನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಟ್ಟು ಆಗ ತಮ್ಮ ಪರ್ಸನಲ್ ಎಕ್ಸ್‌ಪ್ಲನೇಷನ್ ಹೇಳುವುದಕ್ಕೆ ಅವರಿಗೂ ಕೂಡ ಅವಕಾಶವಾಗುತ್ತದೆ. ಆಗ ಒಂದೇ ಹುಂತದಲ್ಲಿ ತಮ್ಮ ಹೇಳಿಕೆಯೂ ರೆಕಾರ್ಡ್‌ಗೆ ಹೋಗುತ್ತದೆ. ಮಾನ್ಯ ಈ ಸದನದ ಗೌರವಾನ್ವಿತ ಸದಸ್ಯರೊಬ್ಬರ ಬಗ್ಗೆ ಪತ್ರಿಕೆಗಳು ಹೇಳಿದ ಆಧಾರದ ಮೇಲೆ ಅಥವಾ ತಾವೇ ಮಾಡಿರತಕ್ಕ ಪರಿಶೋಧನೆ ನನ್ನ ತಿಳುವಳಿಕೆಗೆ ಬಂದಿದೆ ಹಾಗೆಂದು ಹೇಳಿದ್ದೀರಿ. ಅದಕ್ಕೂ ಕೂಡ ಸೂಕ್ತ ಸಮಜಾಯಿಸಿ ಕೊಡುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶ ಕೊಡುವ ಒಂದು ಭೂಮಿಕೆಯನ್ನು ತಾವು ನಿರ್ಮಾಣ ಮಾಡಿಕೊಡಬೇಕು. ಇದರ ಬಗ್ಗೆ ತಾವು ಆಲೋಚನೆ ಮಾಡಿ.

12.10. ಪಿ.ಎಂ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಸನ್ಮಾನ್ಯ ಅಧ್ಯಕ್ಷರೇ, ತಾವು ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದೀರಿ. ಇಲ್ಲದೇ ಹೋದರೆ ಇದರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಲೇ ಇರಲಿಲ್ಲ. ಮತ್ತು ನಾನು ಯಾರ ಮೇಲೆಯಾದರೂ ಆಪಾದನೆ ಮಾಡಿದಾಗ, ಅವರು ಎಂತಹ ಕಟುವಾದ, ಭಯಂಕರವಾದ ತಪ್ಪು ಮಾಡಿದ್ದರೂ ಸಹಿತ ಅವರಿಗೆ ಎಕ್ಸ್‌ಪ್ಲೇನ್ ಮಾಡುವುದಕ್ಕೆ ಅವಕಾಶ ಇರಲೇಬೇಕಾಗುತ್ತದೆ. ಸದನದ ಒಳಗಡೆ ಈ ನಿಯಮ ಇರುವುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದೇ ರೀತಿಯಲ್ಲಿ ನಾನು ನಿಮಗೆ ಬರೆದು ಕೊಡುತ್ತೇನೆ. ನಾನು, ಮಾನ್ಯ ದೇಶಪಾಂಡೆಯವರು ಇವತ್ತು ಮತ್ತು ನಾಳೆ ವೈಯಕ್ತಿಕವಾದ ಕಾರಣದಿಂದ ಸದನದಲ್ಲಿ ಇರಲಿಕ್ಕೆ ಆಗುತ್ತಿಲ್ಲ. ನಾವು ಎಲ್ಲಾ ವಿರೋಧಪಕ್ಷದವರು ಸಹಿತ ಇದರ ಬಗ್ಗೆ ತಮಗೆ ಬರೆದುಕೊಡುತ್ತೇವೆ. ನಾನು ಕೇಳುತ್ತೇನೆ. ಈ ಕ್ರೈಮ್ ನಡೆದಿರತಕ್ಕಂಥಾದ್ದು ಎಲ್ಲಿ ? ಹುಬ್ಬಳ್ಳಿಯಲ್ಲಿ. Crime has taken place in Hubli. I am not accusing anybody. ತಾವು ದಯವಿಟ್ಟು ಅರ್ಥಮಾಡಿಕೊಳ್ಳಬೇಕು. I am not accusing.

ನಾನು ಅವರನ್ನು ವೈಯಕ್ತಿಕವಾಗಿ I am not indulging in character assassiation. I am the last man to do that. ನಾನು ಖಂಡಿತವಾಗಿ ಹೇಳುತ್ತೇನೆ. ಸಾರ್ವಜನಿಕ ಜೀವನದಲ್ಲಿ ವೈಯಕ್ತಿಕವಾಗಿ ಶಾಸಕರ ಬಗ್ಗೆ, ರಾಜಕಾರಣಿಗಳ ಬಗ್ಗೆ, ಜನರಿಗೆ ಎಷ್ಟೊಂದು ಜುಗುಪ್ಸೆ ಇದೆಯೆಂಬುದು ತಮಗೆಲ್ಲ ಗೊತ್ತಿರತಕ್ಕಂಥಾದ್ದು. ನಾನು ಕೆಸರಿಗೆ ಕಲ್ಲು ಎಸೆದು ಸಿಡಿಸತಕ್ಕ ಕೆಲಸ ಮಾಡತಕ್ಕವನಲ್ಲ. ನಾನು ಹೇಳುತ್ತೇನೆ, ಇವತ್ತು ಈ ಆಪಾದನೆ ಬಂದಿರತಕ್ಕಂಥಾದ್ದು ನಿಜ. ಇದು ಆಗಿರತಕ್ಕಾಂಥದ್ದು ನಿಜ. ನಾನು ನಿಮಗೆ ಬರೆದುಕೊಡುತ್ತೇನೆ. ಅವರು ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡಲಿ. ಸಾರ್ವಜನಿಕ ಜೀವನದ ಮೌಲ್ಯಗಳನ್ನು ಎತ್ತಿಹಿಡಿಯುವ ದೃಷ್ಟಿಯಿಂದ ಈ ಸರ್ಕಾರದ ಗೌರವ ಮತ್ತು ಜನರ ಮಧ್ಯೆ ಇರತಕ್ಕಂಥ ವಿಶ್ವಾಸವನ್ನು ಎತ್ತಿಹಿಡಿಯುವ ದೃಷ್ಟಿಯಿಂದ ಅವರು ಒಪ್ಪಿಕೊಂಡಿದ್ದಾರೆ. ನೀವು ಬರೆದುಕೊಡಿ, ನಾನು ಮತ್ತೊಮ್ಮೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಮಾನ್ಯ ಸಭಾನಾಯಕರು, ಉಪಮುಖ್ಯಮಂತ್ರಿಗಳು ಸಹಿತ ಒಪ್ಪಿಕೊಂಡಿದ್ದಾರೆ. ಆದ್ದರಿಂದ ನಾನು ಈ ವಿಷಯದ ಬಗ್ಗೆ ಚರ್ಚೆಯನ್ನು ಇಷ್ಟಕ್ಕೇ ನಿಲ್ಲಿಸಿ ಒಂದೇ ಒಂದು ಮಾತನ್ನು ಹೇಳುತ್ತೇನೆ. ಈ ಸರ್ಕಾರದ ಘನತೆಯನ್ನು ಎತ್ತಿಹಿಡಿಯುವ ದೃಷ್ಟಿಯಿಂದ, ನಿಮ್ಮ ಮುಖಂಡತ್ವದ ಘನತೆಯನ್ನು ಎತ್ತಿಹಿಡಿಯುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನೀವು ತಕ್ಷಣ ಅವರಿಂದ ರಾಜೀನಾಮೆಯನ್ನು ತೆಗೆದುಕೊಳ್ಳಬೇಕು. Ceasars wife should be above suspicion ಎಂದು ಹೇಳುತ್ತಾರೆ. ಇವತ್ತು ಆಗಿರತಕ್ಕಂಥಾದ್ದು ಏನು ? ಅವರಿಗೆ ಏನಾದರೂ ಸಹಾಯ ಮಾಡಬೇಕು ಎಂದು ತಮಗೆ ಇದ್ದರೆ Voluntarily he should have resinged by this time.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಅಧ್ಯಕ್ಷರೇ, ಇದು ನಾನು ಬಹಳ ನೋವಿನಿಂದ

ಆಡುತ್ತಿರತಕ್ಕಂಥ ಮಾತು. ಏಕೆಂದರೆ ಡೆಮಾಕ್ರಸಿ ಬಗ್ಗೆ ಜನರಿಗೆ ಸಂಪೂರ್ಣವಾಗಿ ವಿಶ್ವಾಸ ಹೋಗುವುದರೊಳಗಾಗಿ ನಾವು ನಮ್ಮ ನಡವಳಿಕೆಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ. ನಾನು ಯಾವುದೋ ಮಾಜಿ ಮಂತ್ರಿಗಳ ಬಗ್ಗೆ ಹೇಳಿದ್ದೆ. ಏಕೆ ಬಹಳ ನೋವಿನಿಂದ ಹೇಳುತ್ತಿದ್ದೇನೆ ಎಂದರೆ, ಡಾಲರ್ ಕಾಲನಿಯಲ್ಲಿ ಯಾವುದೋ ಒಂದು ಮನೆ ನನ್ನದಲ್ಲ ಎಂದು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟು ಇವತ್ತು ಆ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ don't you think that he is laughing at democracy.

ಅಧ್ಯಕ್ಷರು:– ಪ್ರೊಫೆಸರ್‌ರವರೇ, ತಾವು ದಯವಿಟ್ಟು ನನಗೆ ಬರೆದು ಕಳಿಸಿ. I cannot allow all these things.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಅಧ್ಯಕ್ಷರೆ, I just wanted to know what action the Chief Minister has taken.

ಅಧ್ಯಕ್ಷರು:– ತಾವು ಬರೆದು ಕಳುಹಿಸಿ. ನಾನು ಸರ್ಕಾರಕ್ಕೆ ತಿಳಿಸುತ್ತೇನೆ. ಏಕೆಂದರೆ

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– Sir.....

ಅಧ್ಯಕ್ಷರು:– ಇಂತಹ ವಿಷಯವನ್ನು ಎತ್ತಬೇಕಾದರೆ ತಾವು ನನ್ನ ಸಂಗಡ ಪ್ರಸ್ತಾಪ ಮಾಡಬೇಕು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಅಧಿಕೃತ ದಾಖಲೆಗಳನ್ನು ಕೊಟ್ಟಿದ್ದೇನೆ.

ಶಾಸನ ರಚನೆ ಕಾರ್ಯಕಲಾಪಗಳು

ಕರ್ನಾಟಕ ಲಿಫ್ಟ್‌ಗಳ (ತಿದ್ದುಪಡಿ) ವಿಧೇಯಕ, 1993

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು, ನೀರಾವರಿ ಮತ್ತು ವಿದ್ಯುಚ್ಛಕ್ತಿ ಸಚಿವರು):– ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಲಿಫ್ಟ್‌ಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ 1993ರ ಕರ್ನಾಟಕ ಲಿಫ್ಟ್‌ಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು, ನೀರಾವರಿ ಮತ್ತು ವಿದ್ಯುಚ್ಛಕ್ತಿ ಸಚಿವರು):– ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಲಿಫ್ಟ್‌ಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಅನುಬಂಧ ವಿಧೇಯಕವನ್ನು ಮಂಡಿಸಲಾಯಿತು.

ಎತ್ತೀಯ ಕಾರ್ಯಕಲಾಪಗಳು

ಅಧ್ಯಕ್ಷರು:– 1993–94ನೇ ಸಾಲಿನ ಕೆಳಕಂಡ ಬೇಡಿಕೆಗಳ ಬಗ್ಗೆ ಚರ್ಚೆ....

ಶ್ರೀ ಹೆಚ್. ಏಕಾಂತಯ್ಯ:– ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಮಾನ್ಯ ಅಧ್ಯಕ್ಷರೇ,